## ನಿಮ್ಮೊಡನೆ

# ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ

ಲೇಖಕ ಸಲ್ಮಾನ್ ರಷ್ದಿ ಅವರಿಗೆ ರಕ್ಷಣೆ ಕೊಡುವುದು ರಾಜಸ್ಥಾನ ಮತ್ತು ಭಾರತ ಸರ್ಕಾರಗಳಿಗೆ ಕಷ್ಟದ ಕೆಲಸವೇನೂ ಆಗಿರಲಿಲ್ಲ. ರಕ್ಷಣೆ ಕೊಡುವುದು ಎರಡೂ ಸರ್ಕಾರಗಳಿಗೆ ಬೇಕಿರಲಿಲ್ಲ. ರಷ್ದಿ ಅವರಿಗೆ ಜೈಪುರ ಸಮ್ಮೇಳನದಲ್ಲಿ ಭಾಗವಹಿಸಲು ಅವಕಾಶ ನೀಡಿದರೆ ಉತ್ತರಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಗಳಲ್ಲಿ ಮುಸ್ಲಿಂ ಮತದಾರರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ವಿರುದ್ಧ ಮತ ಚಲಾಯಿಸಬಹುದು ಎಂಬ ಆತಂಕ ಪಕ್ಷದ ರಾಷ್ಟ್ರೀಯ ನಾಯಕರಿಗಿತ್ತು. ಆದರಿಂದಾಗಿಯೇ ರಷ್ದಿ ಅವರ ಭಾರತ ಭೇಟಿಗೆ ಅವಕಾಶ ನಿರಾಕರಿಸಲಾಯಿತು.



ಲೇಖಕ ಸಲ್ಮಾನ್ ರಷ್ದಿ ಅವರನ್ನು ಜೈಪುರ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸದಂತೆ ತಡೆಯುವ ಮತೀಯ ಶಕ್ತಿಗಳ ಹುನ್ನಾರಕ್ಕೆ ರಾಜಸ್ಥಾನ ಸರ್ಕಾರ ಕುಮ್ಮಕ್ಕು ನೀಡಿದ್ದು ಅತ್ಯಂತ ದುರದೃಷ್ಟಕರ ಬೆಳವಣಿಗೆ. ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶ ಎಂದು ಹೇಳಿಕೊಳ್ಳುವ ಭಾರತದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದಕ್ಕೆ ಅರ್ಥವೇ ಇಲ್ಲ. ಅದು ಸಮಯ, ಸಂದರ್ಭಗಳನ್ನು ಅವಲಂಬಿಸಿ ನಿರ್ಧಾರವಾಗುತ್ತದೆ ಎಂಬುದು ಮತ್ತೊಮ್ಮೆ ಸಾಬೀತಾಯಿತು. ರಷ್ದಿ ಅವರು ಜೈಪುರ ಸಮ್ಮೇಳನದಲ್ಲಿ ಭಾಗವಹಿಸುವುದಕ್ಕೆ ಮುಸ್ಲಿಮರ ಪ್ರಮುಖ ಸಂಘಟನೆಯೊಂದು ವಿರೋಧ ವ್ಯಕ್ತಪಡಿಸಿತ್ತು. ಅದನ್ನೇ ನೆಪ ಮಾಡಿಕೊಂಡ ಅಲ್ಲಿನ ಸರ್ಕಾರ ಅವರ ಭೇಟಿಗೆ ಅವಕಾಶ ನಿರಾಕರಿಸುವ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಡೆಗಣಿಸಿತು.

ರಷ್ದಿ ಅವರಿಗೆ ರಕ್ಷಣೆ ಕೊಡುವುದು ರಾಜಸ್ಥಾನ ಮತ್ತು ಭಾರತ ಸರ್ಕಾರಗಳಿಗೆ ಕಷ್ಟದ ಕೆಲಸವೇನೂ ಆಗಿರಲಿಲ್ಲ. ರಕ್ಷಣೆ ಕೊಡುವುದು ಎರಡೂ ಸರ್ಕಾರಗಳಿಗೆ ಬೇಕಿರಲಿಲ್ಲ. ರಷ್ದಿ ಅವರಿಗೆ ಜೈಪುರ ಸಮ್ಮೇಳನದಲ್ಲಿ ಭಾಗವಹಿಸಲು ಅವಕಾಶ ನೀಡಿದರೆ ಉತ್ತರಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಗಳಲ್ಲಿ ಮುಸ್ಲಿಂ ಮತದಾರರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ವಿರುದ್ಧ ಮತ ಚಲಾಯಿಸಬಹುದು ಎಂಬ ಆತಂಕ ಪಕ್ಷದ ರಾಷ್ಟ್ರೀಯ ನಾಯಕರಿಗಿತ್ತು. ಆದರಿಂದಾಗಿಯೇ ರಷ್ದಿ ಅವರ ಭಾರತ ಭೇಟಿಗೆ ಅವಕಾಶ ನಿರಾಕರಿಸಲಾಯಿತು ಎಂದೇ ಈ ಬೆಳವಣಿಗೆಯನ್ನು ಅರ್ಥೈಸಬೇಕಾದೀತು. ಉತ್ತರ ಪ್ರದೇಶ ರಾಜ್ಯವೊಂದರಲ್ಲೇ ಶೇ.18ರಷ್ಟು ಮುಸ್ಲಿಂ ಮತದಾರರಿದ್ದಾರೆ. ಐದು ರಾಜ್ಯಗಳ ಮುಸ್ಲಿಂ ಮತದಾರರನ್ನು ಓಲೈಸುವ ಸಲುವಾಗಿಯೇ ಕೇಂದ್ರ ಸರ್ಕಾರ ಅವರಿಗಾಗಿ ಹೊಸ ಮೀಸಲಾತಿ ಘೋಷಿಸಿದೆ. ಇಂತಹ ಪರಿಸ್ಥಿತಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಗಿಂತ ಪಕ್ಷದ ಭವಿಷ್ಯವೇ ಕಾಂಗ್ರೆಸ್ ನಾಯಕತ್ವಕ್ಕೆ ಮುಖ್ಯವಾಯಿತು.

ಸಲ್ಮಾನ್ ರಷ್ದಿ ಅವರ 'ಸಟಾನಿಕ್ ವರ್ಸಸ್' ಕಾದಂಬರಿ ಇಸ್ಲಾಂ ಆಶಯಕ್ಕೆ ವಿರುದ್ಧವಾಗಿದೆ ಎಂಬ ಹುಯಿಲು ಭಾರತವೂ ಸೇರಿದಂತೆ ಅನೇಕ ದೇಶಗಳ ಸಂಪ್ರದಾಯವಾದಿ ಮುಸ್ಲಿಮರದು. ರಷ್ದಿ ಅವರನ್ನು ವಿರೋಧಿಸುವ ಮುಸ್ಲಿಮರು ಭಾರತದಲ್ಲೂ ಇದ್ದಾರೆ. ಈ ಹಿನ್ನೆಲೆಯಲ್ಲಿ ರಷ್ದಿ ಅವರಿಗೆ ಜೈಪುರ ಸಮ್ಮೇಳದಲ್ಲಿ ಭಾಗವಹಿಸಲು ಅವಕಾಶ ನಿರಾಕರಿಸುವ  ನಿರ್ಧಾರವನ್ನು ಕಾಂಗ್ರೆಸ್ ಆಡಳಿತವಿರುವ ರಾಜಸ್ಥಾನ ಸರ್ಕಾರ ತೆಗೆದುಕೊಂಡಿತೇ? ಅಥವಾ ನಿರ್ಧಾರಕ್ಕೆ ಬರಲು ಯುಪಿಎ ಸರ್ಕಾರ ಮತ್ತು ಕಾಂಗ್ರೆಸ್ ನಾಯಕತ್ವದ ಒತ್ತಾಯ ಕಾರಣವೇ? ರಷ್ದಿ ಅವರು ಸಮ್ಮೇಳನದ ಪ್ರತಿನಿಧಿಗಳ ಜತೆಯಲ್ಲಿ ವೀಡಿಯೊ ಸಂವಾದ ನಡೆಸಲೂ ಸರ್ಕಾರ ಅವಕಾಶ ಕೊಡಲಿಲ್ಲ. ರಷ್ದಿ ಜೈಪುರಕ್ಕೆ ಬಂದರೆ ಅವರ ಜೀವಕ್ಕೆ ಅಪಾಯ ಎದುರಾಗಬಹುದು ಎಂಬ ಪೊಲೀಸರ ವರದಿಯನ್ನು ದಾಳವನ್ನಾಗಿ ಮಾಡಿಕೊಂಡಿತು. ಪೊಲೀಸರ ವರದಿ ಹಿನ್ನೆಲೆಯೂ ಸಂಶಯಾಸ್ಪದ.

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡುವ ವಿಷಯದಲ್ಲಿ ಪ್ರತಿ ಪಕ್ಷ ಬಿಜೆಪಿಯೂ ಕಾಂಗ್ರೆಸ್‌ಗಿಂತ ಭಿನ್ನವಾಗಿಲ್ಲ. ಕಲಾವಿದ ಎಂ.ಎಫ್. ಹುಸೇನ್ ಅವರು ದೇಶಬಿಟ್ಟು ಹೋಗಲು ಬಿಜೆಪಿಯನ್ನು ಬೆಂಬಲಿಸುವ ಮೂಲಭೂತವಾದಿ ಹಿಂದೂ ಸಂಘಟನೆಗಳೇ ಕಾರಣ ಎನ್ನುವುದನ್ನು ಮರೆಯುವಂತಿಲ್ಲ. 1988ರಲ್ಲಿ ಸಲ್ಮಾನ್ ರಷ್ದಿ ಅವರ 'ಸಟಾನಿಕ್ ವರ್ಸಸ್' ಕಾದಂಬರಿ ಅನೇಕ ದೇಶಗಳ ಸಂಪ್ರದಾಯವಾದಿ ಮುಸ್ಲಿಮರ ಕೆಂಗಣ್ಣಿಗೆ ಗುರಿಯಾಗಿತ್ತು. ಅದನ್ನು ಭಾರತದಲ್ಲೂ ನಿಷೇಧಿಸಬೇಕು ಎಂಬ ಒತ್ತಾಯ ಕೇಳಿ ಬರುತ್ತಿದ್ದಂತೆ ಆಗಿನ ರಾಜೀವ್ ಗಾಂಧಿ ಸರ್ಕಾರ ಹಿಂದೆ ಮುಂದೆ ನೋಡದೆ ಕಾದಂಬರಿಯನ್ನು ನಿಷೇಧಿಸಿತು. ಆಗಲೂ ಸರ್ಕಾರಕ್ಕೆ ವೋಟ್ ಬ್ಯಾಂಕ್ ರಕ್ಷಣೆಯೇ ಮುಖ್ಯವಾಯಿತು. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿಯಬೇಕು ಎಂದು ಅನ್ನಿಸಲೇ ಇಲ್ಲ. ಯಾವುದೇ ಸಾಹಿತ್ಯ ಕೃತಿಯನ್ನು ಜನರು ಓದುವ ಮೊದಲೇ ನಿಷೇಧಿಸುವುದರ ಹಿಂದೆ ದುರುದ್ದೇಶವಲ್ಲದೆ ಬೇರೇನು ಇರಲು ಸಾಧ್ಯ?

ಸಲ್ಮಾನ್ ರಷ್ದಿ ಅವರ ಜೈಪುರ ಭೇಟಿಗೆ ವಿರೋಧ ವ್ಯಕ್ತಪಡಿಸಿದ ಸಂಘಟನೆಯ ಮನವೊಲಿಸುವ ಪ್ರಯತ್ನವನ್ನು ರಾಜ್ಯ ಸರ್ಕಾರ ಮಾಡಲಿಲ್ಲ.  ಸಮ್ಮೇಳನದಲ್ಲಿ ಭಾಗವಹಿಸಲು ರಷ್ದಿ ಅವರಿಗೆ ಅವಕಾಶ ಮಾಡಿಕೊಡುವಂತೆ ಒತ್ತಾಯಿಸುವ ಪ್ರಗತಿ ಪರ ಸಾಹಿತಿ, ಕಲಾವಿದರ ಮತ್ತು ಜನಪರ ಸಂಘಟನೆಗಳ ಒತ್ತಾಯಕ್ಕೆ ಸರ್ಕಾರದ ನಿರ್ಧಾರವನ್ನು ಬದಲಾಯಿಸುವ ಶಕ್ತಿ ಇರಲಿಲ್ಲ. ಹೀಗಾಗಿ ಕಾಂಗ್ರೆಸ್ ಪಕ್ಷದ ರಾಜಕೀಯ ಹಿತಾಸಕ್ತಿಯ ಎದುರು ಅಭಿವ್ಯಕ್ತಿ ಸಾತಂತ್ರ್ಯ ಅರ್ಥ ಕಳೆದುಕೊಳ್ಳುವಂತಾದದ್ದು ಪ್ರಜಾಪ್ರಭುತ್ವ ವ್ಯವಸ್ಥೆಯ ದುರಂತ.

■ ಪ್ರೇಮಕುಮಾರ್ ಹರಿಯಬ್ಬೆ